**O.S. 306-2013**
**DW-1**

**ದಿನಾಂಕಃ 21.11.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ **ವಾದಿ ಪರ ಶ್ರೀ. ಎಚ್.ಎನ್.ಬಿ.ಎನ್ ವಕೀಲರಿಂದಃ**

ನಾನು ಎಸ್.ಎಸ್.ಎಲ್.ಸಿ ಯ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ವಾದಿಯವರು ಈ ದಾವೆಯನ್ನು ನನ್ನ ತಂದೆಯ ವಿರುದ್ಧ ಸಲ್ಲಿಸಿದ್ದಾರೆ ಎಂದರೆ ಸರಿ. ನನ್ನ ತಂದೆ ಪ್ರತಿವಾದಿಯವರಿಗೆ ವಯಸ್ಸಾದ ಕಾರಣ ಕಣ್ಣು ಸರಿಯಾಗಿ ಕಾಣದೆ ಇರುವುದರಿಂದ ಅವರಿಗೆ ನಡೆದಾಡಲು ಸಾಧ್ಯವಾಗದೆ ಇರುವುದರಿಂದ ನನಗೆ ಸಾಕ್ಷ್ಯ ನುಡಿಯಲು ಜಿ.ಪಿ.ಎ ನೀಡಿರುತ್ತಾರೆ. ಸದರಿ ವಿಚಾರಕ್ಕೆ ಸಂಬಂಧಿಸಿದಂತೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಯಾವ ದಾಖಲೆ ನೀಡಿದ್ದೇನೆ ಎಂದು ನನಗೆ ಗೊತ್ತಿಲ್ಲ. ವಾದಿಯವರು ನಮ್ಮ ಜಮೀನಿನಲ್ಲಿ ಪೂರ್ವ ಪಶ್ಚಿಮ 12 ಅಡಿಗಳು ಮತ್ತು ಉತ್ತರ ದಕ್ಷಿಣವಾಗಿ 69 ಅಡಿಗಳ ರಸ್ತೆ ಬೇಕು ಎಂದು ಈ ದಾವೆ ಸಲ್ಲಿಸಿರುತ್ತಾರೆ. ವಾದ ಪತ್ರದಲ್ಲಿ ನಮೂದಾಗಿರುವ ವಿಚಾರಗಳು ನನಗೆ ಗೊತ್ತಿಲ್ಲ. ನನ್ನ ತಂದೆಯವರು ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ.

ಈ ದಾವೆಯಲ್ಲಿ ನ್ಯಾಯಾಲಯವು ಮಧ್ಯಂತರ ತಡೆಯಾಜ್ಞೆ ನೀಡಿದೆ ಎಂದರೆ ಸರಿ. ನಾವು ಈ ದಾವೆಯಲ್ಲಿ ಪ್ರತಿವಾದ ಪತ್ರ ಸಲ್ಲಿಸುವ ಸಂದಬರ್ಭದಲ್ಲಿ ಮತ್ತು ಮಧ್ಯಂತರ ಅರ್ಜಿ ಸಲ್ಲಿಸುವ ಸಮಯದಲ್ಲಿ ಯಾವುದೇ ಭಾವಚಿತ್ರಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಆನಂತರ ಈ ನ್ಯಾಯಾಲಯದಲ್ಲಿ 28 ಭಾವಚಿತ್ರಗಳನ್ನು ಹಾಜರುಪಡಿಸಿದ್ದೇವೆ ಎಂದರೆ ಸರಿ. ನಾನು ನ್ಯಾಯಾಲಯದಲ್ಲಿ ಸಲ್ಲಿಸಿರುವ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ವಿಚಾರಗಳು ನನಗೆ ಗೊತ್ತಿರುತ್ತವೆ. ನಮ್ಮ ತಂದೆಯವರು ದಿನಾಂಕ 02.06.1989 ರಂದು ಪ್ರತಿವಾದ ಪತ್ರದ ಅನುಸೂಚಿ ಸ್ವತ್ತನ್ನು ಮಂಚೇಗೌಡರವರಿಂದ ಖರೀದಿಸಿದ್ದರು. ಸದರಿ ಮಂಚೇಗೌಡ ರವರಿಗೆ ಪ್ರತಿವಾದ ಪತ್ರದ ಅನುಸೂಚಿ ಸ್ವತ್ತು ಹೇಗೆ ಬಂದಿತ್ತು ಎಂದು ನನಗೆ ಗೊತ್ತಿಲ್ಲ.

ವಾದಿಯವರ ತಾತನ ಹೆಸರು ಮಾದೇಗೌಡ ಎಂದರೆ ಸರಿ. ವಾದಿಯವರ ತಂದೆಯ ಕುನ್ನೇಗೌಡ ಎಂದರೆ ಸರಿ. ಸದರಿ ಕುನ್ನೇಗೌಡರವರು ಮಾದೇಗೌಡ ರವರ 1 ನೇ ಹೆಂಡತಿ ಸಿದ್ದಮ್ಮ ರವರ ಮಗ ಎಂದರೆ ಸರಿ. ಮಂಚೇಗೌಡ ಎಂಬುವವರು ಮಾದೇಗೌಡ ರವರ 3 ನೇ ಹೆಂಡತಿಯ

ಮಗ ಎಂದರೆ ಸರಿ. ವಾದಿಯ ತಾತ ಮಾದೇಗೌಡ, ವಾದಿಯ ತಂದೆ ಕುನ್ನೇಗೌಡ ಮತ್ತು ವಾದಿಯ ಚಿಕ್ಕಪ್ಪ ಮಂಚೇಗೌಡ ರವರು ತಮ್ಮ ಕುಟುಂಬದ ಆಸ್ತಿಗಳನ್ನು ದಿನಾಂಕ 07.05.1955 ರಂದು ನೊಂದಾಯಿತ ವಿಭಾಗ ಪತ್ರದ ಮೂಲಕ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ನೊಂದಾಯಿತ ವಿಭಾಗ ಪತ್ರದ ಮೂಲಕ ಸರ್ವೆ ನಂ. 393/2 ರಲ್ಲಿ ಪೂರ್ವ ಪಶ್ಚಿಮ 23 ಗಜ ಮತ್ತು ಉತ್ತರ ದಕ್ಷಿಣ 23 ಗಜವುಳ್ಳ ಖಾಲಿ ನಿವೇಶನವು ಮಂಚೇಗೌಡ ರವರ ಭಾಗಕ್ಕೆ ಬಂದಿತ್ತು ಎಂದರೆ ಸರಿ. ಸದರಿ ನಿವೇಶನದ ಚೆಕ್ಕುಬಂದಿ ಪೂರ್ವಕ್ಕೆ ಚಿಕ್ಕವನ ಮನೆ ಎಂದರೆ ಸರಿ. ಪಶ್ಚಿಮಕ್ಕೆ ಕೆಂಚೇಗೌಡ ರವರ ಮನೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು ಪಶ್ಚಿಮಕ್ಕೆ ನಮ್ಮ ಖಾಲಿ ನಿವೇಶನ ಬರುತ್ತದೆ ಎಂದು ನುಡಿಯುತ್ತಾರೆ. ದಕ್ಷಿಣಕ್ಕೆ ಭಾವಿ ಮತ್ತು ಕುನ್ನೇಗೌಡ ರವರ ಖಾಲಿ ಜಾಗ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು ಗಲ್ಲಿ ಎಂದು ನುಡಿಯುತ್ತಾರೆ. ಉತ್ತರಕ್ಕೆ ರಸ್ತೆ ಎಂದರೆ ಸರಿ. ಸದರಿ ನೊಂದಾಯಿತ ವಿಭಾಗ ಪತ್ರದಲ್ಲಿ ಪೂರ್ವದ ಕಡೆಗೆ ದಕ್ಷಿಣೋತ್ತರವಾಗಿ ಪೂರ್ವ ಪಶ್ಚಿಮ 5 ಗಜ ಅಗಲದ ಜಾಗವನ್ನು ಚಿಕ್ಕವನ ಮನೆಯ ಒತ್ತಿನಿಂದ ತಿರುಗಾಡಲು ಬಿಡಲಾಗಿದೆ ಎಂದು ನಮೂದಿಸಲಾಗಿದೆ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀಸವಾಲಿಗೆ ಸಮಯವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ